ಮಾಡಬಾರದೆಂದು ಮಂತ್ರಿಗಳ ಹತ್ತಿರ ಬಂದು ಇನ್‌ಫ್ಲುಯೆನ್ಸ್ ಮಾಡುತ್ತಿದ್ದಾರೆ. ಇದರ ಬಗೆ ಬಹಳ ನೊಂದು ಹೇಳುತ್ತೇನೆ. ಕೆಲವು ಜನ ಅರಣ್ಯ ಅಧಿಕಾರಿಗಳು ಸಹಿತ ಇದನ್ನು ಮಾಡಬಾರದೆಂಬ ಭಾವನೆಯನ್ನು ಹೊಂದಿದ್ದಾರೆ. ಈ ಜಾಗ ಸಂಮಾರು ೪೯೦೦ ಅಡಿ ಎತ್ತರದಲ್ಲಿದೆ. ಬಡ ಜನರು ಇದ್ದಾರೆ ಅವರಿಗೆ ಪ್ರಯೋಜನ ಆಗಬಹುದೆಂದು ಸರ್ಕಾರ ಈ ಯೋಜನೆಯನ್ನು ಕೈಗೆ ಎತ್ತಿಕೊಂಡಿದೆ. ಇದಕ್ಕೆ ಸರ್ಕಾರದ ಕ್ಯಾಬಿನೆಟ್ ಡಿಸಿಷನ್ ಕೂಡ ಆಗಿದೆ. ಆದರೂ ಸಹಿತ ಈತನಕ ಸರ್ಕಾರೀ ಆದೇಶವನ್ನು ಏತಕ್ಕೆ ಇನ್ನು ಹೊರಡಿಸಿಲ್ಲ. ಇನ್ನೂ ಎರಡನೆಯ ಪ್ರಶ್ನೆ ಏನೆಂದರೆ ಅಪ್ಪಿಕೊ ಚಳುವಳಿ ಛಾಂಪಿಯನ್ ಬಹುಗುಣರವರು ಇಲ್ಲಿಗೆ ಭೇಟಿ ಕೊಟ್ಟಿದ್ದರು. ಇದನ್ನು ಮಾಡಬೇಕೋ ಬೇಡವೋ ಎಂಬುದರ ಬಗ್ಗೆ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟರು. ಆದನ್ನು ಮಾಡಬಹುದೆಂದು ಇಲ್ಲಿ ಹೇಳಿ, ನಂತರ ಮುಖ್ಯ ಮಂತ್ರಿಗಳ ಹತ್ತಿರ ಬಂದು ಪುನಃ ಪರಿಶೀಲನೆ ಮಾಡಿ ನೋಡಬೇಕೆಂದು ಹೇಳಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದಾರೆ. ಇದಕ್ಕೆ ಈಗಾಗಲೇ ೪೨ ಲಕ್ಷ ರೂಪಾಯಿ ಖರ್ಚಾಗಿದೆ. ಪೆಸ್ಟನ್‌ಘಾಟ್ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಹಣ ಕೂಡ ಇದಕ್ಕೆ ಬರುತ್ತಿದೆ. ಆದ್ದರಿಂದ ಇದನ್ನು ಕೂಡಲೇ ಮಾಡಬೇಕೆಂದು ಸನ್ಮಾನ್ಯ ಸಚಿವರಿಗೆ ವಿನಂತಿಸಿಕೊಳ್ಳುತ್ತೇನೆ. ಇದನ್ನು ಕೈಬಿಡಬಾರದೆಂದು ಎಂದು ಕೇಳಿಕೊಳ್ಳುತ್ತೇನೆ. ಆ ಊರಿನ ೭-೮ ಗ್ರಾಮಗಳ ಜನ ಒಂದು ಕಮಿಟಿ ಮಾಡಿ ಒಂದು ವಿನವಿಯನ್ನು ಕೂಡ ಕೊಟ್ಟಿದ್ದಾರೆ. ಆದ್ದರಿಂದ ಇದನ್ನು ಕೈಗೆತ್ತಿಕೊಂಡು ಬೇಗ ಮುಗಿಸಿಯೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.—ಸರ್ಕಾರ ಉದ್ದೇಶ ಕೂಡ ಆದಷ್ಟು ತೀವ್ರವಾಗಿ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ಇದೆ. ಸದಸ್ಯರ ಕಳಕಳಿ ನಮಗೂ ಅರ್ಥವಾಗಿದೆ. ಆದಷ್ಟು ತೀವ್ರ ದಿಸೆಯಲ್ಲಿ ನಿರ್ಧಾರ ತೆಗೆದುಕೊಂಡು ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ ಎಂದು ಹೇಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತಾಮ್ರದ ಗಣಿಗಳ ವಾರ್ಷಿಕ ಆದಾಯದ ಬಗ್ಗೆ

೧೮೩೫. ಶ್ರೀ ಎನ್.ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದಲ್ಲಿರುವ ತಾಮ್ರದ ಗಣಿಗಳಿಂದ ಬರುತ್ತಿರುವ ವಾರ್ಷಿಕ ಆದಾಯವೆಷ್ಟು;

ಆ) ಖಾಸಗಿಯವರಿಗೆ ಗುತ್ತಿಗೆ ನೀಡಿರುವ ತಾಮ್ರದ ಗಣಿಗಳ ಪ್ರಮಾಣ ಹಾಗೂ ಅದರಿಂದ ಬರುತ್ತಿರುವ ಆದಾಯ ವೆಷ್ಟು ;

ಇ) ಕಳೆದ ಮೂರು ವರ್ಷಗಳಿಂದ ಕಲ್ಯಾಡಿ ಮತ್ತು ಇಂಗಳದಾಳು ತಾಮ್ರದ ಗಣಿಗಳಲ್ಲಿ ಈವರೆವಿಗೆ ಹೂಡಲಾಗಿರುವ ಬಂಡವಾಳ ವೆಷ್ಟ ಹಾಗೂ ಬಂದಿರುವ ಆದಾಯವೆಷ್ಟು (ಪ್ರಾರಂಭದಿಂದ ೩೧-೩-೮೮ರವರೆಗೆ)

ಈ) ಹಣಕಾಸಿನ ಅವ್ಯವಹಾರಗಳು ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಅಂತಹ ಪ್ರಕರಣಗಳೆಷ್ಟು? ಮತ್ತು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಖಾಸಗಿಯವರಿಗೆ ತಾಮ್ರದ ಗಣಿಗಳನ್ನು ಗುತ್ತಿಗೆಗೆ ಕೊಟ್ಟಿರುವುದಿಲ್ಲ.

ಇ) ತಾಮ್ರದ ಗಣಿಗಳಿಂದ ಆದಾಯ ಬಂದಿಲ್ಲವಾದ್ದರಿಂದ ಹೊಡಲಾಗಿರುವ ಬಂಡವಾಳದ ಮೊತ್ತ ಹಾಗೂ ನಷ್ಟವನ್ನು ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದೆ.

ಆರ್ಥಿಕ ವರ್ಷ	ಇಂಗಳದಾಳ ತಾಮ್ರದ ಗಣಿ		ಕಲ್ಯಾಡಿ ತಾಮ್ರದ ಗಣಿ	
	ಹೂಡಿದ ಬಂಡವಾಳ	ನಷ್ಟ	ಹೂಡಿದ ಬಂಡವಾಳ	ನಷ್ಟ
		(ರೂ. ಲಕ್ಷಗಳಲ್ಲಿ)		
೧೯೭೩–೭೪	೧೨೪.೫೭	೩೧.೬೫		
೧೯೭೪–೭೫	೧೪೩.೫೯	೧೨.೯೯		
೧೯೭೫–೭೬	೨೮೩.೯೫	೨೮.೨೯		
೧೯೭೬–೭೭	೨೬೯.೭೪	೨೭.೪೧		
೧೯೭೭–೭೮	೩೧೫,೩೩	೧೬.೭೫	(ಅಕ್ಟೋಬರ್ ೮೧ ರಲ್ಲಿ	
೧೯೭೮–೭೯	೯೨.೫೬	೨೬.೨೩	ಉತ್ಪಾದನೆಯನ್ನು	
೧೯೭೯–೮೦	೮೮ ೦೦	೩೮.೨೫	ಪ್ರಾರಂಭಿಸಲಾಯಿತು).	
೧೯೮೦–೮೧	೧೧೮.೪೭	೪೦.೪೩		
೧೯೮೧–೮೨	೧೨೮.೯೧	೩೧.೪೨	೨೦೨.೭೯	೪೧.೧೫
೧೯೮೨–೮೩	೧೪೩.೧೦	೨೬.೬೯	೧೯೯.೫೪	೭೩.೦೭
೧೯೮೩–೮೪	೧೧೧.೫೫	೨೬.೧೫	೧೮೬.೭೭	೫೨.೦೩ ಮರ್ಜರ್
೧೯೮೪–೮೫	೨೨೨.೨೫	೫೭.೩೩	೧೮೨.೮೨	೧೪೬.೪೨
೧೯೮೫–೮೬	೨೨೬.೦೮	೫೯.೪೫	೨೦೩.೨೨	೯೬.೩೪
೧೯೮೬–೮೭	೩೬೦.೩೩	೧೨೭.೨೪	೨೯೭.೦೧	೮೨.೫೪
೧೯೮೭–೮೮	—	೯೬.೧೮	—	೮೧.೬೧

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ